ಅಸಲು ದಾವೆ ಸಂಖ್ಯೆ - 165/2019
ಡಿಡಬ್ಲ್ಯೂ - 01
ದಿನಾಂಕಃ 15.07.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ. ಸಿ ಎಸ್ ಎಂ ವಕೀಲರಿಂದ**

ನನ್ನ ಆಸ್ತಿ ಸರ್ವೆ ನಂ.98/2. ವಾದಿ ನಮ್ಮ ಊರಿನವರು. ವಾದಿಯ ಆಸ್ತಿ ಸರ್ವೆ ನಂ.98/6 ಎಂದರೆ ಸರಿ. ಅವರ ವಿಸ್ತೀರ್ಣ 03 ಎಕರೆ 19 ಗುಂಟೆ ಇರುತ್ತದೆ ಎಂದರೆ ಸರಿ. ಅವರ ಆಸ್ತಿಯ ಪಶ್ಚಿಮಕ್ಕೆ ನನ್ನ ಮತ್ತು ಉಳಿದ ಪ್ರತಿವಾದಿಯರ ಆಸ್ತಿ ಇರುತ್ತದೆ ಎಂದರೆ ಸರಿ. ಸರ್ವೆ ನಂ.98/1 ರಾಜೇಶ ಮಲ್ಲಣ್ಣನವರ ಇವರ ಆಸ್ತಿ ಎಂದರೆ ಸರಿ. ಸರ್ವೆ ನಂ.98/3 ಗೂಳಪ್ಪ ಕಿತ್ತೂರು ಇವರ ಆಸ್ತಿ ಎಂದರೆ ಸರಿ. ಸರ್ವೆ ನಂ.98/4, 4 ನೇ ಪ್ರತಿವಾದಿಯ ಆಸ್ತಿ ಎಂದರೆ ಸರಿ. 2018 ರಲ್ಲಿ ವಾದಿ ತನ್ನ ಜಮೀನನ್ನು ಅಳತೆ ಮಾಡಲು ಅರ್ಜಿ ಕೊಟ್ಟಿದ್ದ ಎಂದರೆ ಸರಿ, ನಾವು ಸಹ ಕೊಟ್ಟಿದ್ದೆವು. ಅದರಂತೆ ನನಗೆ ಮತ್ತು ಉಳಿದ ಪ್ರತಿವಾದಿಯರಿಗೆ ಹಾಗೂ ವಾದಿಗೆ ತಾಲ್ಲೂಕಾ ಸರ್ವೆಯರ್ ಇವರು ಅಳತೆ ಮಾಡಲು ನೋಟಿಸು ನೀಡಿದ್ದರು ಎಂದರೆ ಸರಿ. ದಿನಾಂಕಃ 24.04.2018 ರಂದು ತಾಲ್ಲೂಕಾ ಸರ್ವೆಯರ್ ಇವರು ದಾವಾ ಆಸ್ತಿಯನ್ನು ಅಳತೆ ಮಾಡಲು ಬಂದಿದ್ದರು ಎಂದರೆ ಆ ದಿನ ನಾನು ಇರಲಿಲ್ಲ. ಆ ದಿನ ನಾನು ಮತ್ತು ಎಲ್ಲಾ ಪ್ರತಿವಾದಿಯರು ಹಾಜರಿದ್ದೆವು ಎಂದರೆ ನಾನು ಇರಲಿಲ್ಲ. ಆ ದಿನ ತಾಲ್ಲೂಕಾ ಸರ್ವೆಯರ್ ವಾದಿಯ, ನನ್ನ ಮತ್ತು ಎಲ್ಲಾ ಪ್ರತಿವಾದಿಯರ ಜಮೀನನ್ನು ಅಳತೆ ಮಾಡಿರುತ್ತಾರೆ ಎಂದರೆ ನಾನು ಇರಲಿಲ್ಲ. ನಾನು ಇದ್ದರೂ ಸಹ ಇಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಮಾತ್ರ ಸಹಿ ಮಾಡಿರುತ್ತಾನೆ, ಉಳಿದವರು ಸಹಿ ಮಾಡಲು ತಿರಸ್ಕರಿಸುತ್ತೇವೆ ಎಂದರೆ ಆ ದಿನ ನನ್ನ ತಮ್ಮ ಹಾಜರಿರಬಹುದು ನಾನು ಇರಲಿಲ್ಲ. ಸದರಿ ಸರ್ವೆಯರವರು ಸರ್ವೆ ಮಾಡಿ ವರದಿ ಸಲ್ಲಿಸಿದ್ದು ಅದರ ಪ್ರಕಾರ ನಾನು ಮತ್ತು ಉಳಿದ ಪ್ರತಿವಾದಿಯರು ಸೇರಿ 10 ಗುಂಟೆ ವಾದಿಯ ಜಮೀನನ್ನು ಒತ್ತುವರಿ ಮಾಡಿರುತ್ತೇವೆ ಅಂತಾ ವರದಿಯಲ್ಲಿ ತಿಳಿಸಿರುತ್ತಾರೆ ಎಂದರೆ ಪೂರ್ವಕ್ಕೆ ಒಂದು ಬದು ಇದ್ದು ಅದನ್ನು ಬಿಟ್ಟು ಅಳತೆ ಮಾಡಿರುತ್ತಾರೆ. ಆದಾದ ನಂತರ ವಾದಿಯು ನಮಗೆ 10 ಗುಂಟೆ ಜಮೀನನ್ನು ಬಿಟ್ಟುಕೊಡುವಂತೆ ಕೇಳಿಕೊಂಡರೂ ಸಹ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಇದರಲ್ಲಿ ಯಾವುದೇ ತಕರಾರು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿರುವ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾವು ವಾದಿಯ ಜಮೀನಿನಲ್ಲಿ 10 ಗುಂಟೆ ಜಮೀನನ್ನು ಒತ್ತುವರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಒತ್ತುವರಿ ಮಾಡಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.